ಖೇತ್ರಿ ಆಶ್ರಮ

ರಾಮಕೃಷ್ಣ ಮಹಾಸಂಘದ ಏಪ್ರಿಲ್ ತಿಂಗಳ ಚಟುವಟಿಕೆಗಳು

ಹೊಸ ಶಾಖಾ ಕೇಂದ್ರ : ಇತ್ತೀಚಿನವರೆಗೆ ರಾಮಕೃಷ್ಣ ಮಠ, ಶ್ಯಾಮಪುಕುರ ಇದರ ಉಪ ಶಾಖಾಕೇಂದ್ರವಾಗಿದ್ದ **ಕಥಾಮೃತ ಭವನ**ವು ಈಗ ಪ್ರತ್ಯೇಕ ಶಾಖಾಕೇಂದ್ರವಾಗಿ ಪರಿವರ್ತಿತವಾಗಿದೆ.

ಸ್ವಾಮಿ ವಿವೇಕಾನಂದರ ಚಿಕಾಗೋ ಭಾಷಣದ ೧೨ನೇ ವಾರ್ಷಿಕೋತ್ಸವ: ಆಂಟ್‌ಪುರ ಆಶ್ರಮವು ಏಪ್ರಿಲ್ ೧೫ರಂದು ನಡೆಸಿದ ಸಾರ್ವಜನಿಕ ಸಭೆಯಲ್ಲಿ ೩೫೦ ಮಂದಿ ಭಕ್ತರು ಭಾಗವಹಿಸಿದ್ದರು. **ಗದಾಧರ ಆಶ್ರಮ,** ಕೋಲ್ಕತ್ತಾ ಕೇಂದ್ರವು ಏಪ್ರಿಲ್ ೧೦ರಂದು ಹೂಗ್ಲಿ ಜಿಲ್ಲೆಯ ಒಂದು ಶಾಖೆಯಲ್ಲಿ ನಡೆಸಿದ ಉಪನ್ಯಾಸ ಕಾರ್ಯಕ್ರಮದಲ್ಲಿ ೨೦೦ ಮಂದಿ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಭಾಗವಹಿಸಿದ್ದರು. **ಕಾಂಕುರಗಾಚಿ** ಆಶ್ರಮವು ಏಪ್ರಿಲ್ ೨೮ರಂದು ನಡೆಸಿದ ಆಧ್ಯಾತ್ಮಿಕ ಶಿಬಿರದಲ್ಲಿ ೪೪೬ ಮಂದಿ ಭಕ್ತರು ಭಾಗವಹಿಸಿದ್ದರು. **ಮಂಗಳೂರು** ಆಶ್ರಮವು ಏಪ್ರಿಲ್ ತಿಂಗಳಲ್ಲಿ ೧೦ ವಿವಿಧ ಕಾಲೇಜುಗಳಲ್ಲಿ ನಡೆಸಿದ ಭಾಷಣ ಕಾರ್ಯಕ್ರಮಗಳಲ್ಲಿ ೨೧೫೦ ಯುವಕ-ಯುವತಿಯರು ಭಾಗವಹಿಸಿದ್ದರು.

ಶಾಖಾಕೇಂದ್ರಗಳ ಚಟುವಟಿಕೆಗಳು : ಖೇತ್ರಿ ಆಶ್ರಮದ ನವೀಕರಣಗೊಂಡ **ಫತೇ ಬಿಲ್ಲಾಸ್ ಅರಮನೆ**ಯನ್ನು ಮಾರ್ಚ್ ೩೧ರಂದು ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಸುವೀರಾನಂದಜಿಯವರು ಉದ್ಘಾಟಿಸಿದರು. ಈ ಅರಮನೆಯಲ್ಲಿ ಸ್ವಾಮಿ ವಿವೇಕಾನಂದರು ೧೮೯೧ರಲ್ಲಿ ಹಾಗೂ ೧೮೯೩ರಲ್ಲಿ ಆಗಿನ ಮಹಾರಾಜರಾಗಿದ್ದ ರಾಜಾ ಅಜಿತ್‌ಸಿಂಗ್‌ನ ಆತಿಥಿಯಾಗಿ ತಂಗಿದ್ದರು. ಈ ಅರಮನೆಯಲ್ಲಿ ಈಗ ನಿರ್ಮಿಸಿರುವ **ಅಜಿತ್-ವಿವೇಕ ವಸ್ತುಪ್ರದರ್ಶನಾಲಯ**ವನ್ನು ಕೂಡ ಪ್ರಧಾನ ಕಾರ್ಯದರ್ಶಿಯವರು ಉದ್ಘಾಟಿಸಿದರು. ಉದ್ಘಾಟನಾ ಕಾರ್ಯಕ್ರಮದ ಅಂಗವಾಗಿ ಮಾರ್ಚ್ ೩೦ ಹಾಗೂ ೩೧ರಂದು ಸಾರ್ವಜನಿಕ ಸಭೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಖೇತ್ರಿ ಆಶ್ರಮದ ವಜ್ರಮಹೋತ್ಸವದ ಅಂಗವಾಗಿ ಈ ಕಾರ್ಯಕ್ರಮಗಳು ನಡೆದವು. ಸುಮಾರು ೫೦ ಮಂದಿ ಸಂನ್ಯಾಸಿಗಳು ಹಾಗೂ ೪೦೦ ಮಂದಿ ಭಕ್ತರು, ಹಿತೈಷಿಗಳು ಈ ಎರಡು ದಿನಗಳ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. **ಬಾರಾನಗರ ಮಠ**ದಲ್ಲಿ ಏಪ್ರಿಲ್ ೨೮ ರಂದು ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಸ್ಮರಣಾನಂದಜಿ ಮಹಾರಾಜ್ ಅವರು ಉದ್ದೇಶಿತ ಡಿಸ್ಪೆನ್ಸರಿ ಹಾಗೂ ಅನೌಪಚಾರಿಕ ಶಾಲೆಯ ಕಟ್ಟಡದ ಶಿಲಾನ್ಯಾಸ ಕಾರ್ಯಕ್ರಮವನ್ನು ನೆರವೇರಿಸಿದರು. ಉಪಾಧ್ಯಕ್ಷರಾದ ಸ್ವಾಮಿ ವಾಗೀಶಾನಂದಜಿ ಮಹಾರಾಜ್, ಪ್ರಧಾನ ಕಾರ್ಯದರ್ಶಿಗಳು, ಹಾಗೂ ಸುಮಾರು ೩೦೦ ಮಂದಿ ಸಂನ್ಯಾಸಿಗಳು, ೩೦೦೦ಕ್ಕೂ ಹೆಚ್ಚು ಭಕ್ತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. **ಬೆಂಗಳೂರು, ಕೊಚ್ಚಿ, ಪೊನ್ನಂಪೇಟೆ** ಆಶ್ರಮಗಳಲ್ಲಿ ಏಪ್ರಿಲ್ ತಿಂಗಳಲ್ಲಿ ಬೇಸಿಗೆ ಶಿಬಿರಗಳು ನಡೆದವು.

ಭಾರತ ಸರ್ಕಾರದ ಮಾನವ ಸಂಪನ್ಮೂಲ ಸಚಿವಾಲಯದ ನ್ಯಾಷನಲ್ ಇನ್‌ಸ್ಟಿಟ್ಯೂಷನಲ್ ರ‍್ಯಾಂಕಿಂಗ್ ಫ್ರೇಮ್‌ವರ್ಕ್(NIRF) ಸಂಸ್ಥೆಯ ಮತಿಯಿಂದ ೨೦೧೯ ನೇ ಇಸವಿಯಲ್ಲಿ ತಯಾರಿಸಿದ ಪಟ್ಟಿಯಲ್ಲಿ ರಾಮಕೃಷ್ಣ ಮಹಾಸಂಘದ ನಾಲ್ಕು ಪದವಿ ಕಾಲೇಜುಗಳು ಉತ್ತಮ ಸ್ಥಾನವನ್ನು ಗಳಿಸಿವೆ. ಈ ಕಾಲೇಜುಗಳ ವಿವರ: ೧) ವಿವೇಕಾನಂದ ಸೆಂಟೆನರಿ ಕಾಲೇಜು, **ರಹರಾ** (ರಾಷ್ಟ್ರೀಯ ರ‍್ಯಾಂಕ್-೮, ಪ.ಬಂಗಾಳ ರಾಜ್ಯ ರ‍್ಯಾಂಕ್-೧) ೨) **ವಿದ್ಯಾಮಂದಿರ,** ಶಾರದಾಪೀಠ (ರಾಷ್ಟ್ರೀಯ ರ‍್ಯಾಂಕ್-೧೧, ಪ.ಬಂಗಾಳ ರಾಜ್ಯ ರ‍್ಯಾಂಕ್-೩) ೩) ರೆಸಿಡೆನ್ಷಿಯಲ್ ಕಾಲೇಜು, **ನರೇಂದ್ರಪುರ** (ರಾಷ್ಟ್ರೀಯ ರ‍್ಯಾಂಕ್-೧೫, ಪ.ಬಂಗಾಳ ರಾಜ್ಯ ರ‍್ಯಾಂಕ್-೪), ೪) ಆರ್ಟ್ಸ್-ಸೈನ್ಸ್ ಕಾಲೇಜು, **ಕೊಯಮತ್ತೂರು ಮಿಷನ್** (ರಾಷ್ಟ್ರೀಯ ರ‍್ಯಾಂಕ್-೫೯, ತಮಿಳುನಾಡು ರಾಜ್ಯ ರ‍್ಯಾಂಕ್-೧೮)

ಬಾಗ್ದಾ ಆಶ್ರಮ

ಮೌಲ್ಯ ಶಿಕ್ಷಣ ಹಾಗೂ ಯುವಸಮ್ಮೇಳನಗಳು

ಬಾಗ್ದಾ ಆಶ್ರಮವು ಪುರುಲಿಯಾ ಜಿಲ್ಲೆಯ ೧೩ ಶಾಲೆಗಳಲ್ಲಿ ಫೆಬ್ರವರಿ ೭ರಿಂದ ಮಾರ್ಚ್ ೨೯ರ ವರೆಗೆ ೧೪ ಮೌಲ್ಯ ಶಿಕ್ಷಣ ಕಾರ್ಯಕ್ರಮಗಳನ್ನು ನಡೆಸಿತು. ಇದರಲ್ಲಿ ೨೭೦೦ ವಿದ್ಯಾರ್ಥಿಗಳು ಹಾಗೂ ೧೦೦ ಮಂದಿ ಅಧ್ಯಾಪಕರು ಭಾಗವಹಿಸಿದ್ದರು. **ದೆಹಲಿ** ಆಶ್ರಮವು ಏಪ್ರಿಲ್ ೩ರಿಂದ ೨೬ರ ವರೆಗೆ ಭಾರತದಾದ್ಯಂತ ೧೨ ನಗರಗಳಲ್ಲಿ ನಡೆಸಿದ ೨೬ ಮೌಲ್ಯ ಶಿಕ್ಷಣ ವಿಚಾರ ಸಂಕಿರಣಗಳಲ್ಲಿ ೧೭೪೫ ಅಧ್ಯಾಪಕರು ಹಾಗೂ ೯೩ ಪ್ರಾಂಶುಪಾಲರು ಭಾಗವಹಿಸಿದ್ದರು. **ರಾಜ್‌ಕೋಟ್** ಆಶ್ರಮವು ಏಪ್ರಿಲ್ ೧೬, ೧೮ ಹಾಗೂ ೨೦ರಂದು ನಡೆಸಿದ ಮೂರು ಮೌಲ್ಯ ಶಿಕ್ಷಣ ಕಾರ್ಯಕ್ರಮಗಳಲ್ಲಿ ೧೯೫ ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಏಪ್ರಿಲ್ ೧೭ರಂದು ನಡೆದ ಮಾನವ ಶ್ರೇಷ್ಠತಾ ಕಾರ್ಯಕ್ರಮದಲ್ಲಿ ೫೬ ಮಂದಿ ಬ್ಯಾಂಕ್ ಆಫೀಸರುಗಳು ಪಾಲ್ಗೊಂಡಿದ್ದರು.

Managing Editor : Swami Muktidananda
Editor : Swami Jnanayogananda
Printed and Published by Swami Atmajnananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020